

ಎದೆ ಢವಢವ ಹೊಡೆದುಕೊಳ್ಳತೊಡಗಿತು. 'ಸಾರ್ ಈಗ ಕಾರ್ಡು ಇಲ್ಲ ಅಂದ್ರ ಆಗಲ್ವ...' ಬೆದರಿಕೊಂಡಂತೆ ಕೇಳಿದಳು. ಮಾತು ನಡುಗುತ್ತಿತ್ತು.

'ಸಂಜೆ ಡಾಕ್ಟ್ರು ಬರಬಹುದು.. ಅವ್ರನ್ನೇ ಕೇಳಿ...' ಎಂದು ಮುಂದೆ ಮಾತನಾಡುವುದು ವ್ಯರ್ಥ ಎಂಬಂತೆ ಅವನು ಮತ್ತೆ ಮೊಬೈಲ್‌ನಲ್ಲಿ ಮುಳುಗಿಹೋದ.

ಸಂಜೆಯವರೆಗೂ ಕಾಯದೆ ಬೇರೆ ದಾರಿಯಿರಲಿಲ್ಲ. ಅಲ್ಲೊಂದು ಕಡೆ ಮುದುಡಿ ಕೂತಳು ಆಸ್ಪತ್ರೆಯ ಗೋಳುಗಳು ಅವಳ ಮೇಲೆ ಸುರಿಯತೊಡಗಿದವು. ನಂದೀಶ ಅವರಿವರಿಗೆ ಕರೆ ಮಾಡಿ ಇದರ ಕುರಿತೇ ಏನೇನೊ ಮಾತಾಡತೊಡಗಿದ್ದ.

* * *

ನಿನ್ನೆ ಸಂಜೆ ಹೊಲ ಹೊಡೆಯುತ್ತಿದ್ದ ಪರಸಪ್ಪ ಅರ್ಧಕ್ಕೆ ಟ್ರ್ಯಾಕ್ಟರ್ ಬಿಟ್ಟು ಇಳಿದು ಹೋದದ್ದು